ಕಲಿಯುವ ಕಲೆ

# ಸುಂದರಬನ

೬



ಶಿಕ್ಷಕರು/ಮಕ್ಕಳು/ಪಾಲಕರಲ್ಲಿ ನಿವೇದನೆ:
‘ಸುಂದರಬನ’ದಲ್ಲಿ ಸುಂದರ ಕಲಿಕಾ ಅನುಭವ ಪಡೆಯಲು ಆಯಾ ಪುಟಗಳಲ್ಲಿ ಕೊಟ್ಟಿರುವ ‘ನಮ್ಮ ಆಶಯ’ವನ್ನು ತಾವು ಗಮನಿಸಿ. ಆ ಪ್ರಕಾರ ಚಟುವಟಿಕೆಗಳನ್ನು ಮಾಡಿರಿ/ಮಾಡಿಸಿರಿ.

ಹೆಸರು: ..................................................................

ಶಾಲೆ: ..................................................................


ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

‘ಧ್ವನಿ’ ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ನವೆಂಬರ್ – ಡಿಸೆಂಬರ್ ೨೦೨೪–೨೫

ಪೂರಣ ಯೋಜನೆ
Poorana 2024-25 Project is Supported by Many Individual Donors

# ಕಥಾ ಸಮಯ



ಇತಿಹಾಸ: 'ಉತ್ತರ ಭಾರತದ ಪ್ರಾಚೀನ ರಾಜ ಮನೆತನಗಳು' ಪಾಠಕ್ಕೆ ಪೂರಕ

**ಭಾಷಾ ಚೌಕ**


**ಸಾಹಸ – Adventure** (ಅಡ್ವೆಂಚರ್)

**ಕುತೂಹಲ – Curiosity** (ಕ್ಯೂರಿಯಾಸಿಟಿ)

**ಪ್ರಯತ್ನ – Effort** (ಎಫರ್ಟ್)

**ನಮ್ಮ ಆಶಯ:** ಮೇಲೆ ಪೃಥ್ವೀರಾಜ ಚೌಹಾಣನ ಜೀವನದಲ್ಲಿ ನಡೆದ ಸ್ವಾರಸ್ಯಕರ ಘಟನೆಯ ಚಿತ್ರವನ್ನು ಕೊಡಲಾಗಿದೆ ಗಮನಿಸು. ಆ ಘಟನೆಯಾದರಿತ ಒಂದು ಪುಟ್ಟ ಕಥೆ ಕಟ್ಟಿ ಬರೆ.

# ಚಿಕಣಿ ಚಿತ್ರಕಲೆ




ಇತಿಹಾಸ: 'ಉತ್ತರ ಭಾರತದ ಪ್ರಾಚೀನ ರಾಜ ಮನೆತನಗಳು' ಪಾಠಕ್ಕೆ ಪೂರಕ

**ನಮ್ಮ ಆಶಯ:** ರಜಪೂತರರ ಆಳ್ವಿಕೆಯಲ್ಲಿ ಚಿಕಣಿ ವರ್ಣಚಿತ್ರಗಳಿಗೆ ಹೆಚ್ಚು ಹೆಚ್ಚು ಪ್ರೋತ್ಸಾಹಿಸುತ್ತಿದ್ದರು. ಅಂತಹ ಒಂದು ಚಿಕಣಿ ರೇಖಾಚಿತ್ರವನ್ನು ಇಲ್ಲಿ ಕೊಡಲಾಗಿದೆ ಗಮನಿಸು. ನಂತರ ಖಾಲಿ ಸ್ಥಳದಲ್ಲಿ ಆ ಚಿತ್ರವನ್ನು ಬಿಡಿಸುವ ಪ್ರಯತ್ನ ಮಾಡು. ಎರಡೂ ಚಿತ್ರಗಳಿಗೆ ಬಣ್ಣ ಹಚ್ಚು. ಅನಂತರ ರಜಪೂತರರ ಕಲೆ ಮತ್ತು ವಾಸ್ತುಶಿಲ್ಪದ ಕುರಿತು ತರಗತಿಯಲ್ಲಿ ಮಾತನಾಡು.

| ಭಾಷಾ ಚೌಕ |
|---|
| **ಚಿಕಣಿ ಚಿತ್ರಕಲೆ – Miniature painting** (ಮೀನಿಯೇಚರ್ ಪೈಂಟಿಂಗ್) |
| **ಅಲಂಕರಿಸು – Decorate** (ಡೆಕರೇಟ್) |
| **ಗಾಂಭೀರ್ಯ – Dignity** (ಡಿಗ್ನಿಟಿ) |
| **ಪೇಟ/ರುಮಾಲು – Turban** (ಟರ್ಬನ್) |

# ಮಂಡಲ ಕಲೆ




ಮುಕ್ತ ಕಲಿಕೆಗಾಗಿ

**ನಮ್ಮ ಆಶಯ:** ಮೇಲೆನ ಮಂಡಲಕಲೆಯಲ್ಲಿ ಅರಳಿದ ಚಿತ್ರವನ್ನು ಸ್ವಲ್ಪ ಸಮಯ ತದೇಕಚಿತ್ತದಿಂದ ಗಮನಿಸು. ಅನಂತರನಿಧಾನವಾಗಿ ನಿನಗೆ ಇಷ್ಟವಾಗುವ ಬಣ್ಣಗಳನ್ನು ಹಚ್ಚು.

‘ಮಂಡಲ ಕಲೆ’ಯನ್ನು ಹೇಗೆ ಬಿಡಿಸುವುದು? ಎಂಬುದರ ವಿಡಿಯೋವನ್ನು ನೋಡಲು ಇಲ್ಲಿರುವ QR ಕೋಡನ್ನು ಸ್ಕ್ಯಾನ್ ಮಾಡಿ ನೋಡು.

# ಬಣ್ಣದಾಟ




ಇತಿಹಾಸ: 'ಉತ್ತರ ಭಾರತದ ಪ್ರಾಚೀನ ರಾಜ ಮನೆತನಗಳು' ಪಾಠಕ್ಕೆ ಪೂರಕ

**ನಮ್ಮ ಆಶಯ:** ಮೇಲೆ ಕಲಾವಿದರ ಕಲ್ಪನೆಯಲ್ಲಿ ಮೂಡಿದ ಕಾರ್ಕೋಟ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಾಣವಾದ 'ಮಾರ್ತಾಂಡ ಸೂರ್ಯ ದೇವಾಲಯ'ದ ರೇಖಾಚಿತ್ರ ಕೊಡಲಾಗಿದೆ. ಗಮನಿಸಿ, ಬಣ್ಣ ಹಚ್ಚು. ನಂತರ ಈ ದೇವಾಲಯದ ಇತಿಹಾಸ ಸಂಗ್ರಹಿಸಿ ಗೆರೆ ಮೇಲೆ ಬರೆ.


**ಭಾಷಾ ಚೌಕ**

**ವಾಸ್ತುಶಿಲ್ಪ – Architecture** (ಆರ್ಕಿಟೆಕ್ಚರ್)
**ವೈಭವ – Glory** (ಗ್ಲೋರಿ)
**ಐತಿಹಾಸಿಕ – Historical** (ಹಿಸ್ಟೋರಿಕಲ್)

## ಚುಕ್ಕಿಯಾಟ – ೧



## ಚುಕ್ಕಿಯಾಟ –೨



**ನಮ್ಮ ಆಶಯ:** ಚುಕ್ಕಿಯಾಟ ೧ ರಲ್ಲಿ 1 ರಿಂದ 100ರವರೆಗಿನ ಸಂಖ್ಯೆಗಳನ್ನು ಸೇರಿಸು ಮತ್ತು ಚುಕ್ಕಿಯಾಟ ೨ರಲ್ಲಿ 1 ರಿಂದ 100ರವರೆಗಿನ ಸಂಖ್ಯೆಗಳನ್ನು ಸೇರಿಸು. ಮೂಡುವ ಚಿತ್ರಗಳ ಕುರಿತು ಮಾತನಾಡು.

# ಬಣ್ಣದಾಟ



ಇತಿಹಾಸ: 'ಉತ್ತರ ಭಾರತದ ಪ್ರಾಚೀನ ರಾಜ ಮನೆತನಗಳು' ಪಾಠಕ್ಕೆ ಪೂರಕ

**ನಮ್ಮ ಆಶಯ:** ಮೇಲೆ ಅಹೋಮ್ ರಾಜವಂಶದ ಲಾಂಛನದ ರೇಖಾಚಿತ್ರವನ್ನು ಕೊಡಲಾಗಿದೆ ಗಮನಿಸಿ ಬಣ್ಣ ಹಚ್ಚು. ನಂತರ ಅಹೋಮ್ ರಾಜವಂಶದ ಕುರಿತು ಎಂಟು–ಹತ್ತು ಸಾಲು ಬರೆ.

**ಭಾಷಾ ಚೌಕ**

**ಲಾಂಛನ – Emblem** (ಎಂಬ್ಲಮ್)

**ಸಾಮ್ರಾಜ್ಯ – Empire** (ಎಂಪಯರ್)

# ಲೇಖನ ಪುಟ



ಕನ್ನಡ ಪಠ್ಯಪುಸ್ತಕದ 'ಸಿದ್ಧಾರೂಢರ ಜಾತ್ರೆ' ಪಾಠಕ್ಕೆ ಪೂರಕ


**ನಮ್ಮ ಆಶಯ:** ಮೇಲಿನ ಚಿತ್ರವನ್ನು ಗಮನಿಸು. ನಂತರ ನಿಮ್ಮ ಊರು/ಪಕ್ಕದ ಊರುಗಳಲ್ಲಿ ಯಾವ ಯಾವ ಜಾತ್ರೆಗಳು ನಡೆಯುತ್ತವೆ ಮತ್ತು ಅದರ ಇತಿಹಾಸವನ್ನು ತಿಳಿದುಕೊ. ಅನಂತರ ನೀನು ನೋಡಿದ ಜಾತ್ರೆಯ ಕುರಿತು ನಿನ್ನ ಅನುಭವವನ್ನು ಪುಟ್ಟ ಲೇಖನ ರೂಪದಲ್ಲಿ ಬರೆ.


**ಭಾಷಾ ಚೌಕ**

**ಮೆರವಣಿಗೆ – Procession** (ಪ್ರೊಸೆಶನ್)
**ಜನಜಂಗುಳಿ – Crowd** (ಕ್ರೌವ್ಡ್)
**ರಥ – Chariot** (ಚಾರಿಯಟ್)

# ಅಶೋಕನ ಶಾಸನ – ಮಸ್ಕಿ







## ಅಶೋಕನ ಮಸ್ಕಿ ಶಾಸನದ ಸಂಕ್ಷಿಪ್ತ ಪರಿಚಯ

ಕರ್ನಾಟಕದ ರಾಯಚೂರು ಜಿಲ್ಲೆಯ ಮಸ್ಕಿ ಪಟ್ಟಣವು ಐತಿಹಾಸಿಕ ಮಹತ್ವವನ್ನು ಹೊಂದಿದೆ. ದೇವನಾಂಪ್ರಿಯ ಎಂದರೆ ಅಶೋಕನೇ ಎಂದು ಖಚಿತಪಡಿಸಿದ ಕೀರ್ತಿ ಈ ಮಸ್ಕಿ ಶಾಸನಕ್ಕಿದೆ. ಈ ಪ್ರಾಚೀನ ಶಾಸನವು ಮಹಾನ್ ಮೌರ್ಯ ಚಕ್ರವರ್ತಿ ಅಶೋಕನ ನೀತಿಗಳು ಮತ್ತು ತತ್ವಗಳಿಗೆ ಸಾಕ್ಷಿಯಾಗಿದೆ. ಪ್ರಾಚೀನ ಭಾರತದ ಇತಿಹಾಸ, ಸಂಸ್ಕೃತಿ ಮತ್ತು ಆಡಳಿತದ ಬಗ್ಗೆ ನಮಗೆ ಅಮೂಲ್ಯವಾದ ಒಳನೋಟಗಳನ್ನು ಒದಗಿಸುತ್ತದೆ.

### ಐತಿಹಾಸಿಕ ಮಹತ್ವ

ಈ ಶಾಸನವು ಕ್ರಿಸ್ತ ಪೂರ್ವ 3ನೇ ಶತಮಾನದಲ್ಲಿ ಅಶೋಕ ಚಕ್ರವರ್ತಿಯಿಂದ ಕೆತ್ತಲ್ಪಟ್ಟ ಅನೇಕ ಶಾಸನಗಳಲ್ಲಿ ಒಂದಾಗಿದೆ. ಅಶೋಕನು ಭಾರತೀಯ ಉಪಖಂಡವನ್ನು 40 ವರ್ಷಗಳ ಕಾಲ ಆಳಿದನು ಮತ್ತು ಬೌದ್ಧಧರ್ಮ ಪ್ರಚಾರಕ್ಕಾಗಿ ಹೆಸರುವಾಸಿಯಾಗಿದ್ದಾನೆ, ಅವರ ಬೋಧನೆಗಳು ಮತ್ತು ನೀತಿಗಳನ್ನು ಜನರಿಗೆ ಪ್ರಸಾರ ಮಾಡಲು ಶಾಸನಗಳನ್ನು ಬಂಡೆಗಳು ಮತ್ತು ಸ್ಥಂಭಗಳ ಮೇಲೆ ಕೆತ್ತಲಾಗಿದೆ.

ಈ ಶಾಸನವನ್ನು 1951 ರಲ್ಲಿ ಸಿ ಬೀಡನ್ ಅವರು ಕಂಡುಹಿಡಿದರು ನಂತರ ಪುರಾತತ್ವ ಶಾಸ್ತ್ರಜ್ಞ ರಾಬರ್ಟ್ ಸೆವೆಲ್ ಅವರು ಸವಿಸ್ತಾರವಾಗಿ ಅಧ್ಯಯನ ಮಾಡಿದರು. ಶಾಸನವನ್ನು ದೊಡ್ಡ ಗ್ರಾನೈಟ್ ಬಂಡೆಯ ಮೇಲೆ ಕೆತ್ತಲಾಗಿದೆ ಮತ್ತು ಬ್ರಾಹ್ಮಿ ಲಿಪಿಯಲ್ಲಿ ಬರೆಯಲಾಗಿದೆ.

### ಶಾಸನದ ವಿವರಗಳು ಮತ್ತು ಮಹತ್ವ

ಮಸ್ಕಿಯಲ್ಲಿರುವ ಶಾಸನವು ಅಶೋಕನ ಕಲ್ಲುಬಂಡೆ ಶಾಸನಗಳ ಗಮನಾರ್ಹ ಉದಾಹರಣೆಯಾಗಿದೆ. ಇದು ಅತ್ಯಂತ ಉತ್ತಮವಾಗಿ ಸಂರಕ್ಷಿಸಲ್ಪಟ್ಟ ಶಾಸನಗಳಲ್ಲಿ ಒಂದಾಗಿದೆ. ಬಂಡೆಯ ಮೇಲ್ಮೈಯಲ್ಲಿ ಕೆತ್ತಲಾದ ಏಳು ಸಾಲುಗಳ ಶಾಸನವನ್ನು ಒಳಗೊಂಡಿದೆ. ಚಕ್ರವರ್ತಿಯ ಆಲೋಚನೆಗಳು ಮತ್ತು ನಂಬಿಕೆಗಳ ಬಗ್ಗೆ ನಮಗೆ ಒಂದು ನೋಟವನ್ನು ನೀಡುತ್ತದೆ.


ಶಾಸನವು ಪ್ರಾಥಮಿಕವಾಗಿ ಅಶೋಕನ ಅಹಿಂಸೆಯ ಬದ್ಧತೆಯನ್ನು ಮತ್ತು ಅವನ ಪ್ರಜೆಗಳ ಕಲ್ಯಾಣವನ್ನು ತಿಳಿಸುತ್ತದೆ. ಇದು ಪ್ರಾಕೃತ ಭಾಷೆ ಮತ್ತು ಬ್ರಾಹ್ಮಿ ಲಿಪಿಯಲ್ಲಿದೆ. ಇದು ಆ ಕಾಲಘಟ್ಟದಲ್ಲಿನ ಜನರಿಗೆ ಅರ್ಥವಾಗಬಹುದಾದ ಭಾಷೆಯಲ್ಲಿದೆ. ಶಾಸನದಲ್ಲಿ ಅಶೋಕನು ತನ್ನ ಜನರು ಮತ್ತು ಪ್ರಾಣಿಗಳ ಕಲ್ಯಾಣಕ್ಕಾಗಿ ತನ್ನ ಸಮರ್ಪಣೆಯನ್ನು ಘೋಷಿಸುತ್ತಾನೆ. ಅವನು ಎಲ್ಲಾ ಜೀವಿಗಳ ಸಂತೋಷವನ್ನು ಬಯಸಿದನು ಎಂದು ಘೋಷಿಸುತ್ತಾನೆ. ಅವರು ತಮ್ಮ ಧಾರ್ಮಿಕ ಸಹಿಷ್ಣುತೆ ಮತ್ತು ವಿವಿಧ ಧಾರ್ಮಿಕ ಸಮುದಾಯಗಳಿಗೆ ಬೆಂಬಲದ ಬಗ್ಗೆ ಮಾತನಾಡುತ್ತದೆ. ಅಶೋಕನು ಹಿರಿಯರಿಗೆ ಗೌರವವನ್ನು ನೀಡುವ ಮತ್ತು ನೈತಿಕ ವರ್ತನೆಯ ಬಗ್ಗೆ ಮಾಗದರ್ಶನ ನೀಡುತ್ತಾನೆ.

**ಭಾಷಾಚೌಕ**

ಶಿಲಾಶಾಸನ – **Stone inscription**
(ಸ್ಟೋನ್ ಇನ್‌ಸ್ಕ್ರಿಪ್‌ಷನ್)

**ನಮ್ಮ ಆಶಯ:** ಮೇಲೆ ಅಶೋಕನ ಮಸ್ಕಿ ಶಾಸನದ ಮೂಲ ಫೋಟೋ ಮತ್ತು ಅದರ ನಕಲು ಪ್ರತಿಯನ್ನು ಕೊಡಲಾಗಿದೆ ಗಮನಿಸು. ಆ ಶಾಸನದ ಸಂಕ್ಷಿಪ್ತ ಪರಿಚಯವನ್ನು ಓದಿ ತಿಳಿದುಕೊ. ಸಾಧ್ಯವಾದರೆ ಮಸ್ಕಿಯಲ್ಲಿರುವ ಮೂಲ ಶಾಸನವನ್ನು ನೋಡು

# ಫೋಟೋ ಬರಹ....





ಮಿತಿ ಕಲಿಕೆಗಾಗಿ



**ಭಾಷಾ ಚೌಕ**


**ಸವಾರಿ – Ride** (ರೈಡ್)

**ಸಂಭ್ರಮ – Excitement –** (ಎಕ್ಸೈಟ್‌ಮೆಂಟ್)

**ಸೃಜನಾತ್ಮಕ - Creative** (ಕ್ರಿಯೇಟಿವ್)

**ನಮ್ಮ ಆಶಯ:** ಮೇಲಿನ ಚಿತ್ರಗಳನ್ನು ಗಮನಿಸು. ನಂತರ ಅವುಗಳಿಗೆ ಸೂಕ್ತವಾದ ಶೀರ್ಷಿಕೆ/ ತಲೆಬರಹವನ್ನು ಕೊಡು. ಚಿತ್ರಗಳ ಕುರಿತು ಒಂದೆರಡು ವಾಕ್ಯ ಬರೆ.

# ಜಾನಪದ ಕಲೆ




ಮೂಲ ಅಂತರ್ಜಾಲ


ಹಸೆ ಚಿತ್ರ ಕಲೆಯ ಕುರಿತ ವಿಡಿಯೋ ನೋಡಲು ಪಕ್ಕದಲ್ಲಿರುವ QR ಕೋಡ್ ಬಳಸು.

**ನಮ್ಮ ಆಶಯ:** ಮೇಲೆ ಹಸೆ ಚಿತ್ರಕಲೆಯಲ್ಲಿ ಅರಳಿದ ಚಿತ್ರವನ್ನು ಕೊಡಲಾಗಿದೆ, ಗಮನಿಸು. ನಂತರ ಅದೇ ಚಿತ್ರವನ್ನು ಬೇರೊಂದು ಹಾಳೆಯಲ್ಲಿ ಬಿಡಿಸುವ ಪ್ರಯತ್ನ ಮಾಡು. ಹಸೆ ಚಿತ್ರಕಲೆಯ ಕುರಿತು ಹಿರಿಯರಿಂದ ತಿಳಿ.

| ಭಾಷಾ ಚೌಕ |
| --- |
| **ಸಂಪ್ರದಾಯ – Tradition** (ಟ್ರಡಿಷನ್) |
| **ಗುಡಿಸಲು – Cottege/Hut** (ಕಾಟೇಜ್/ಹಟ್) |

# ಜಾಲದಾಟ ೧


'ಯುರೋಪ್ ಖಂಡ' ಭೂಗೋಳ ಪಾಠಕ್ಕೆ ಪೂರಕ




**ನಮ್ಮ ಆಶಯ:**
ಯೂರೋಪ್ ಖಂಡದ ಪ್ರಮುಖ ದೇಶ ಬ್ರಿಟನ್‌ನ ಈ ನಕ್ಷಾಜಾಲದ ಒಳಗೆ ಹೋಗಿ ಹೊರಗೆ ಬರಲು ಎಷ್ಟು ಸಮಯ ಬೇಕಾಗಬಹುದು? ಹೀಗೆ ಮಾಡುವಾಗ ನೀನು ಯಾವ ಸಮುದ್ರದ ಕಡೆಯಿಂದ ಒಳಗೆ ಹೋಗಿ ಯಾವ ಸಮುದ್ರದ ಕಡೆಗೆ ಹೊರಗೆ ಬರುತ್ತೀಯೆ ಅಟ್ಲಾಸ್ ಸಹಾಯದಿಂದ ಹುಡುಕು.

# ಜಾಲದಾಟ ೨

ಖುಷಿ ಕಲಿಕೆಗಾಗಿ




**ನಮ್ಮ ಆಶಯ:** ಮೇಲಿನ ಜಾಲದಲ್ಲಿ 'ಆರಂಭ'ದಿಂದ ಶುರು ಮಾಡಿ 'ಮುಕ್ತಾಯ' ಮಾಡಲು ೬೦ ಸೆಕೆಂಡ್ ಸಮಯ. ಪ್ರಯತ್ನ ಮಾಡು.

# ಪರಿಚಯ ಪುಟ

## ಮೀರಾಬಾಯಿ
ಕ್ರಿ.ಶ. ೧೪೯೮ – ೧೫೪೬



ಮೀರಾಬಾಯಿ ರಾಜಸ್ಥಾನ ಮೇಡತ್‌ನ ರಾಠೋಡ್ ರಾಜಮನೆತನದಲ್ಲಿ ಜನಿಸಿದಳು (೧೪೯೮). ತಂದೆ ರಾಣಾ ರತನಸಿಂಗ್. ಈಕೆ ಚಿಕ್ಕಂದಿನಲ್ಲಿಯೇ, ಶ್ರೀಕೃಷ್ಣನೇ ತನ್ನ ಆರಾಧ್ಯ ದೈವ ಎಂದು ನಂಬಿದ್ದಳು. ಚಿಕ್ಕ ವಯಸ್ಸಿನಲ್ಲಿ ತಂದೆ ತಾಯಿಗಳನ್ನು ಮೀರಾ ಕಳೆದುಕೊಂಡಳು. ತಾತ ರಾವ್ ದೂದಾಜಿಯ ಆಶ್ರಯದಲ್ಲಿ ಬೆಳೆದಳು.



ಮುಂದೆ ಚಿತ್ತೋರಿನ ರಾಜಕುಮಾರ ಭೋಜರಾಜನೊಂದಿಗೆ ಮೀರಾ ಮದುವೆ. ಬಾಬರನೊಂದಿಗೆ ನಡೆದ ಯುದ್ಧದಲ್ಲಿ ಭೋಜರಾಜ ಮರಣ ಹೊಂದಿದ. ಆಕೆಯ ಬಂಧುಗಳೆಲ್ಲ ಸತಿ ಹೋಗುವಂತೆ ಮೀರಾಳನ್ನು ಒತ್ತಾಯಿಸಿದರು. ಶ್ರೀಕೃಷ್ಣ ಪರಮಾತ್ಮನೇ ತನ್ನ ನಿಜವಾದ ಪತಿ. ಆದ್ದರಿಂದ, ಸತಿ ಹೋಗುವ ಪ್ರಶ್ನೆಯೇ ಇಲ್ಲ ಎಂದು ನಿರಾಕರಿಸಿದಳು.

ಗಂಡನ ಮನೆಯಲ್ಲಿ ಈಕೆಯನ್ನು ಕೊಲ್ಲಲು ಹಲವು ಸಲ ಪ್ರಯತ್ನಿಸಲಾಯಿತು. ಅದೆಲ್ಲವನ್ನೂ ಎದುರಿಸಿ, ಕೃಷ್ಣನ ಮೇಲಿನ ಭಕ್ತಿಭಾವವನ್ನು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಸಿಕೊಂಡಳು. ಕೊನೆಗೆ, ಒಂದು ಸಲ ಅರಮನೆ ಬಿಟ್ಟು ಹೊರನಡೆದಳು. ಬೃಂದಾವನದಲ್ಲಿ ಗೋಸ್ವಾಮಿಯನ್ನು ಕಂಡು, ಉಪದೇಶ ಪಡೆದಳು. ಅನಂತರ ದ್ವಾರಕೆಗೆ ಹೋಗಿ, ಅಲ್ಲಿಯೇ ತನ್ನ ಅಂತಿಮ ದಿನಗಳವರೆಗೂ ನೆಲೆಸಿದಳು.

ಇತಿಹಾಸ: 'ದೆಹಲಿಯ ಸುಲ್ತಾನರು' ಪಾಠಕ್ಕೆ ಪೂರಕ



ಮೀರಾಬಾಯಿ
(ರೇಖಾಚಿತ್ರ)

ಇಲ್ಲಿ ಮೀರಾಬಾಯಿ ಚಿತ್ರ ಬಿಡಿಸಿರಿ.

"ಗಿರಿಧರ ಗೋಪಾಲನೇ ನನ್ನ ಸರ್ವಸ್ವ. ಈ ಜಗತ್ತಿನ ಜನಗಳ ಸಂಬಂಧ ನನಗಿಲ್ಲ. ಅವನ ಸಾನಿಧ್ಯಕ್ಕಾಗಿ ತಂದೆ–ತಾಯಿ, ಬಂಧು–ಬಳಗ ಎಲ್ಲರನ್ನೂ ತ್ಯಜಿಸಿದೆ. ಲೋಕಾಪವಾದವನ್ನು ಧಿಕ್ಕರಿಸಿ ಸಾಧುಗಳ ಸತ್ಸಂಗವನ್ನು ಪಡೆದುಕೊಂಡೆ."

ಮೀರಾಬಾಯಿಯ ಒಂದು ಭಜನೆಯ ಸಾರವನ್ನು ಇಲ್ಲಿ ಕೊಡಲಾಗಿದೆ. ಮೀರಾಬಾಯಿ ಬಗ್ಗೆ ಇನ್ನಷ್ಟು ಮಾಹಿತಿ, ಅವರ ಯಾವುದಾದರೂ ಇನ್ನೊಂದು ಭಜನೆಯನ್ನು ಸಂಗ್ರಹಿಸಿ ಇಲ್ಲಿ ಬರೆಯಿರಿ.

ಕನ್ನಡದ ಅಕ್ಕ ಮಹಾದೇವಿ, ತಮಿಳಿನ ಆಂಡಾಳಮ್ಮನ ಹಾಗೇ ಮೀರಾಬಾಯಿ ಸಹ ನೂರಾರು ಭಕ್ತಿಗೀತೆಗಳನ್ನು ರಚಿಸಿದ್ದಾಳೆ. ಇದುವರೆಗೆ ೪೦೦ ಗೀತೆಗಳು ದೊರೆತಿವೆ. ಸ್ವತಃ ರಾಗಸಂಯೋಜನೆ ಮಾಡಿ ಹಾಡಿದ್ದಾಳೆ. ರಾಗ ಗೋವಿಂದ ಮತ್ತು ರಾಗ ಮೀರಾಮಲ್ಹಾರ್ ಮೀರಾಬಾಯಿಯ ಸೃಷ್ಟಿಯಾಗಿವೆ.

# ಪರಿಚಯ ಪುಟ

## ಮೀರಾಬಾಯಿಯ ಒಂದೆರೆಡು ಭಜನೆಗಳು



ಸಿಕ್ಕಿತು ರಾಮರತ್ನವೆಂಬ ನಿಕ್ಷೇಪ ಅಪಾರ –
ದಾನವಿತ್ತರು ಸದ್ಗುರುಗಳು, ಮರೆಯಲಾರೆ ಉಪಕಾರ!

ಜನ್ಮಜನ್ಮಗಳ ಬಡ್ಡಿ ದೊರಕಿತು ನಿಧಿಗೆ,
ಕಳೆದುಹೋದರೇನು ಜಗದ ಎಲ್ಲ ಆಧಾರ!

ವ್ಯಯಿಸಿದರೆ ಕ್ಷೀಣಿಸದು, ಕಳ್ಳರಿಗೆ ಕಾಣಿಸದು,
ದಿನ–ದಿನೇ ವೃದ್ಧಿಸುವ ಧನಪ್ರಕಾರ!

ಸತ್ಯವೆಂಬ ನಾವೆಯಲ್ಲಿ ಸದ್ಗುರು ಅಂಬಿಗನಾಗಿ
ದಾಟಿಸುವನು ನನ್ನನ್ನು ಭವಸಾಗರ!

ಹರ್ಷ ಉತ್ಕರ್ಷದಲ್ಲಿ ಹಾಡುವಳು ಮೀರಾ
ಅವಳ ಏಕೈಕ ಪ್ರಭು ಗಿರಿಧರ ನಾಗರ!

– ಮೂಲ ಭೋಜಪುರಿ ಗೀತೆ
"ಪಾಯೋ ಜೀ ಮೈನೆ ರಾಮ್ ರತನ್ ಧನ್ ಪಾಯೋ!"
ಕನ್ನಡ ಅನುವಾದ – ಸಿ. ಪಿ. ರವಿಕುಮಾರ್
ಆಕರ: cpravikumar-kannada.blogspot.com/

ಮೂಲ ಭೋಜಪುರಿ ಗೀತೆಯನ್ನು ಲತಾ ಮಂಗೇಶ್ಕರ್ ಅವರು ಮಧುರವಾಗಿ ಹಾಡಿದ್ದಾರೆ. ಆ ವಿಡಿಯೋ ನೋಡಲು ಕೆಳಗಿನ QR ಕೋಡ್ ಬಳಸು.

ಇತಿಹಾಸ: 'ದೆಹಲಿಯ ಸುಲ್ತಾನರು' ಪಾಠಕ್ಕೆ ಪೂರಕ

## ಮೀರಾಳಿಗೆ ಶ್ರೀಕೃಷ್ಣನ ವಿಗ್ರಹ ಬಂದ ಪ್ರಸಂಗ:

ಮೀರಾಳ ಅಜ್ಜ ರಾವ್ ದೂದಾಜಿಗೆ ಸಾಧು ಸಂತರೆಂದರೆ ತುಂಬಾ ಗೌರವ. ನಿತ್ಯವೂ ಅರಮನೆಗೆ ಅತಿಥಿಗಳಾಗಿ ಯಾರಾದರೂ ಬರುತ್ತಲೇ ಇದ್ದರು. ಒಮ್ಮೆ ರೈದಾಸ್ ಎನ್ನುವ ಸನ್ಯಾಸಿ ಬಂದರು.

ವೈಷ್ಣವ ಸಂಪ್ರದಾಯವನ್ನು ಉತ್ತರ ಭಾರತದಲ್ಲಿ ಹರಡಿದ ರಮಾನಂದರ ಶಿಷ್ಯರಲ್ಲಿ ರೈದಾಸ್ ಪ್ರಮುಖರು. ಅವರ ಬಳಿ ಶ್ರೀಕೃಷ್ಣನ ಸುಂದರವಾದ ವಿಗ್ರಹವೊಂದಿತ್ತು. ಅದನ್ನು ಇಷ್ಟ ದೈವವಾಗಿಸಿಕೊಂಡು ಪೂಜಿಸುತ್ತಿದ್ದರು. ಅದನ್ನು ಕಂಡ ಮೀರಾ ಆ ವಿಗ್ರಹ ತನಗೆ ಬೇಕೆಂದು ಹಟ ಮಾಡಿದಳು. ಯಾರೆಷ್ಟು ಹೇಳಿದರೂ ಕೇಳಲಿಲ್ಲ. ಒಂದೇ ಹಟ! ಆ ವಿಗ್ರಹ ತನಗೇ ಬೇಕು. ಮಗುವಿನ ಅಳು ನಿಲ್ಲಿಸಲು ಇಷ್ಟ ದೈವವನ್ನು ಕೊಡಲು ಯಾರು ಒಪ್ಪುತ್ತಾರೆ? ಆತಿಥ್ಯ ಸ್ವೀಕರಿಸಿದ ಸನ್ಯಾಸಿ ಹೊರಟು ಹೋದರು.



ಮೀರಾ ತನ್ನ ಅಳು ನಿಲ್ಲಿಸಲಿಲ್ಲ. ಊಟತಿಂಡಿಯನ್ನು ಬಿಟ್ಟು ವಿಗ್ರಹಕ್ಕಾಗಿ ಅಳುತ್ತಿದ್ದಳು. ಮರುದಿನ ಬೆಳಗ್ಗೆ ರೈದಾಸ್ ಹಿಂದಿರುಗಿ ಬಂದು ತನ್ನ ಅಕ್ಕರೆಯ ಶ್ರೀಕೃಷ್ಣನ ವಿಗ್ರಹವನ್ನು ಮೀರಾಳ ಕೈಯಲ್ಲಿರಿಸಿದರು. ಅವಳ ಆನಂದಕ್ಕೆ ಮೇರೆಯೇ ಇಲ್ಲವಾಯಿತು.

ದೂದಾಜಿ 'ಇದೇನು?' ಎಂದು ಆಶ್ಚರ್ಯದಿಂದ ಕೇಳಿದರು.

'ನಿನ್ನೆ ರಾತ್ರಿ ಕನಸಿನಲ್ಲಿ ಶ್ರೀಕೃಷ್ಣ ಕಾಣಿಸಿಕೊಂಡು, ನನ್ನ ಭಕ್ತಳು ನನ್ನ ವಿಗ್ರಹಕ್ಕಾಗಿ ಅಳುತ್ತಿದ್ದಾಳೆ. ವಿಗ್ರಹ ಅವಳಿಗೆ ಕೊಡು ಎಂದು ಹೇಳಿದ. ಪ್ರಭುವಿನ ಆಜ್ಞೆ ಪಾಲಿಸುವುದು ನನ್ನ ಕರ್ತವ್ಯ. ಅದಕ್ಕಾಗಿ ಓಡಿ ಬಂದೆ. ಮೀರಾ ಮಹಾಮಹಿಮಾವಂತಳು' ಎಂದು ಆ ಸನ್ಯಾಸಿ ಮೀರಾಳನ್ನು ಆಶೀರ್ವದಿಸಿ ಹೊರಟು ಹೋದರು. ಹೀಗೆ ರೈದಾಸ್‌ರ ಕೈಯಿಂದ ಶ್ರೀಕೃಷ್ಣನ ವಿಗ್ರಹ ಮೀರಾಳ ಕೈಸೇರಿತು. ಅಂದಿನಿಂದ ಮೀರಾ ರೈದಾಸ್‌ರನ್ನು ತನ್ನ ಗುರುವೆಂದು ಸ್ವೀಕರಿಸಿದಳು. *

ಆಕರ: www.kanaja.in

# ಕಲಾ ಕ್ಷೇತ್ರ....



ಇತಿಹಾಸ: 'ಉತ್ತರ ಭಾರತದ ಪ್ರಾಚೀನ ರಾಜ ಮನೆತನಗಳು' ಪಾಠಕ್ಕೆ ಪೂರಕ

**ನಮ್ಮ ಆಶಯ:** ಮೇಲೆ ಪೃಥ್ವೀರಾಜ ಚೌಹಾನ್ ಅವರ ರೇಖಾಚಿತ್ರ ಕೊಡಲಾಗಿದೆ ಗಮನಿಸು. ನಂತರ ಅದೇ ಚಿತ್ರವನ್ನು ಖಾಲಿ ಸ್ಥಳದಲ್ಲಿ ಬಿಡಿಸಿ ಎರಡೂ ಚಿತ್ರಗಳಿಗೆ ಬಣ್ಣ ಹಚ್ಚು. ಅನಂತರ ಪೃಥ್ವೀರಾಜ ಚೌಹಾನ್ ಕುರಿತು ತರಗತಿಯಲ್ಲಿ ಮಾತನಾಡು.

# ಹಾಡಿನೋಡು

## ಇಳಿದು ಬಾ ತಾಯಿ ಇಳಿದು ಬಾ

೧

ಇಳಿದು ಬಾ ತಾಯಿ
ಇಳಿದು ಬಾ ॥ಪ॥
ಹರನ ಜಡೆಯಿಂದ
ಹರಿಯ ಅಡಿಯಿಂದ
ಋಷಿಯ ತೊಡೆಯಿಂದ
ನುಸುಳಿ ಬಾ
ದೇವದೇವರನು ತಣಿಸಿ ಬಾ
ದಿಗ್‌ದಿಗಂತದಲಿ ಹಣಿಸಿ ಬಾ
ಚರಾಚರಗಳಿಗೆ ಉಣಿಸಿ ಬಾ
ಇಳಿದು ಬಾ ತಾಯಿ ಇಳಿದು ಬಾ.

೨

ನಿನಗೆ ಪೊಡಮಡುವೆ
ನಿನ್ನನುಡುತೊಡುವೆ
ಏಕೆ ಎಡೆತಡೆವೆ
ಸುರಿದು ಬಾ
ಸ್ವರ್ಗ ತೊರೆದು ಬಾ
ಬಯಲ ಜರೆದು ಬಾ
ನೆಲದಿ ಹರಿದು ಬಾ
ಬಾರೆ ಬಾ ತಾಯಿ ಇಳಿದು ಬಾ
ಇಳಿದು ಬಾ ತಾಯೇ
ಇಳಿದು ಬಾ.

೩

ನನ್ನ ತಲೆಯೊಳಗೆ
ನನ್ನ ಬೆಂಬಳಿಗೆ
ನನ್ನ ಒಳಕೆಳಗೆ
ನುಗ್ಗಿ ಬಾ,
ಕಣ್ಣ ಕಣ ತೊಳಿಸಿ
ಉಸಿರ ಎಲೆ ಎಳಸಿ
ನುಡಿಯ ಸಸಿ ಮೊಳಸಿ
ಹಿಗ್ಗಿ ಬಾ ಎದೆಯ ನೆಲೆಯಲ್ಲಿ
ನೆಲೆಸಿ ಬಾ ಜೀವ ಜಲದಲ್ಲಿ ಚಲಿಸಿ
ಬಾ ಮೂಲ ಹೊಲದಲ್ಲಿ ನೆಲೆಸಿ ಬಾ
ಇಳಿದು ಬಾ ತಾಯೇ
ಇಳಿದು ಬಾ.

೪

ಕಂಚು ಮಿಂಚಾಗಿ ತೆರಳಿ ಬಾ
ನೀರು ನೀರಾಗಿ ಉರುಳಿ ಬಾ
ಮತ್ತೆ ಹೊಡೆಮರಳಿ ಬಾ,
ದಯೆಯಿರದ ದೀನ
ಹರೆಯಳಿದ ಹೀನ
ನೀರಿರದ ಮೀನ
ಕರೆಕರೆವ ಬಾ
ಇಳಿದು ಬಾ ತಾಯೇ
ಇಳಿದು ಬಾ.

೫

ಕರು ಕಂಡ ಕರುಳೆ
ಮನ ಉಂಡ ಮರುಳೆ
ಉದ್ದಂಡ ಅರುಳೆ
ಸುಳಿಸುಳಿದು ಬಾ;
ಶಿವಶುಭ್ರ ಕರುಣೆ
ಅತಿಕಿಂಚದರುಣೆ
ವಾತ್ಸಲ್ಯವರಣೆ
ಇಳಿ ಇಳಿದು ಬಾ
ಇಳಿದು ಬಾ ತಾಯೇ
ಇಳಿದು ಬಾ.

೬

ಕೊಳೆಯ ತೊಳೆವವರು ಇಲ್ಲ ಬಾ
ಬೇರೆ ಶಕ್ತಿಗಳ ಹೊಲ್ಲ ಬಾ
ಹೀಗೆ ಮಾಡಿದರು, ಅಲ್ಲ ಬಾ
ನಾಡಿ ನಾಡಿಯನು ತುತ್ತ ಬಾ
ನಮ್ಮ ನಾಡನ್ನೆ ಸುತ್ತ ಬಾ
ಸತ್ತ ಜನರನ್ನು ಎತ್ತ ಬಾ.

೭

ಸುರಸ್ವಪ್ನವಿದ್ದ ಪ್ರತಿಬಿಂಬ
ಉದ್ಬದ್ಧ ಶುಥ ನೀರೇ
ಎಚ್ಚತ್ತು ಎದ್ದ ಆಕಾಶದುದ್ದ
ಧರೆಗಿಳಿಯಲಿದ್ದ ಧೀರೇ
ಸಿರಿವಾರಿಜಾತ ವರಪಾರಿಜಾತ
ತಾರಾ–ಕುಸುಮದಿಂದೆ

೮

ವೃಂದಾರವಂದ್ಯೆ ಮಂದಾರಗಂಧೆ
ನೀನೇ ತಾಯಿ ತಂದೆ.
ರಸಪೂರಜನ್ಯ ನೀನಲ್ಲ ಅನ್ಯೆ
ಸಚ್ಚಿದಾನಂದಕನ್ಯೆ
ಬಂದಾರೆ ಬಾರೆ, ಒಂದಾರೆ ಸಾರೆ
ಕಣ್‌ಧಾರೆ ತಡೆವರೇನೇ?
ಅವತಾರವೆಂದೆ ಎಂದಾರೆ ತಾಯಿ,
ಈ ಅಧಃಪಾತವನ್ನೇ

೯

ಹರಕೆ ಸಂದಂತೆ
ಮಮತೆ ಮಿಂದಂತೆ
ತುಂಬಿ ಬಂದಂತೆ
ದುಮ್ ದುಮ್ ಎಂದಂತೆ
ದುಡುಕಿ ಬಾ
ನಿನ್ನ ಕಂದನ್ನ ಹುಡುಕಿ ಬಾ
ಹುಡುಕಿ ಬಾ ತಾಯೆ
ದುಡುಕಿ ಬಾ

೧೦

ಹರಣ ಹೊಸದಾಗೆ ಹೊಳೆದು ಬಾ
ಬಾಳು ಬೆಳಕಾಗೆ ಬೆಳೆದು ಬಾ
ಕೈ ತೊಳೆದು ಬಾ
ಮೈ ತಳೆದು ಬಾ
ಇಳೆಗಿಳಿದು ಬಾ ತಾಯೀ
ಇಳಿದು ಬಾ ತಾಯಿ
ಇಳಿದು ಬಾ

೧೧

ಶಂಭು–ಶಿವ–ಹರನ ಚಿತ್ತೆ ಬಾ
ದತ್ತ ನರಹರಿಯ ಮುತ್ತೆ ಬಾ
ಅಂಬಿಕಾತನಯನತ್ತೆ ಬಾ
ಇಳಿದು ಬಾ ತಾಯಿ
ಇಳಿದು ಬಾ

ಚಿತ್ರ: 'ಗಂಗಾ ತಾಯಿ' ಚಿತ್ರ ಕೃಪೆ

'ಇಳಿದು ಬಾ ತಾಯಿ' ಹಾಡನ್ನು ೧೯೭೦ರಲ್ಲಿ ಬಿಡುಗಡೆಯಾದ 'ಅರಿಶಿನ ಕುಂಕುಮ' ಸಿನಿಮಾದಲ್ಲಿ ಬಳಸಿಕೊಂಡಿದ್ದಾರೆ. ಆ ಹಾಡನ್ನು ನೃತ್ಯದೊಂದಿಗೆ ನೋಡಲು ಪಕ್ಕದಲ್ಲಿರುವ QR ಕೋಡ್ ಬಳಸು.

'ಇಳಿದು ಬಾ ತಾಯಿ' ಹಾಡನ್ನು ಪಿ. ಕಾಳಿಂಗ ರಾವ್ ಅನಂತರ 'ಪಿ. ಬಿ ಶ್ರೀನಿವಾಸ' ಅವರ ಧ್ವನಿಯಲ್ಲಿ ಕೇಳಲು ಪಕ್ಕದಲ್ಲಿರುವ QR ಕೋಡ್ ಬಳಸು.

**ನಮ್ಮ ಆಶಯ:** ಇಲ್ಲಿ ಅಂಬಿಕಾತನಯದತ್ತರ "ಇಳಿದು ಬಾ ತಾಯಿ" ಕವನದ ಪೂರ್ಣಪಾಠವನ್ನು ಕೊಡಲಾಗಿದೆ ಗಮನಿಸು. ಈ ಹಾಡನ್ನು ಹಾಡಲು ಕಲಿ. ಮಳೆಗೆ ಸಂಬಂಧಿಸಿದ ಬೇರೆ ಬೇರೆ ಹಾಡುಗಳನ್ನು ಸಂಗ್ರಹಿಸು.

# ಕಣ್ಣುಬಿಟ್ಟು





ಇತಿಹಾಸ: 'ಉತ್ತರ ಭಾರತದ ಪ್ರಾಚೀನ ರಾಜ ಮನೆತನಗಳು' ಪಾಠಕ್ಕೆ ಪೂರಕ

**ನಮ್ಮ ಆಶಯ:** ಮೇಲಿನ ಚಿತ್ರಗಳು ನೋಡುವುದಕ್ಕೆ ಒಂದೇ ತರಹ ಕಂಡರೂ ಅವುಗಳಲ್ಲಿ ಹತ್ತು ವ್ಯತ್ಯಾಸಗಳು ಇವೆ. ಅವುಗಳನ್ನು ಗುರುತಿಸು. ನಂತರ ಚಿತ್ರದಲ್ಲಿರುವ ಸನ್ನಿವೇಶ ಕುರಿತು ತರಗತಿಯಲ್ಲಿ ಮಾತನಾಡು.

| ಭಾಷಾ ಚೌಕ |
|---|
| **ಉಡುಗೊರೆ/ಕಾಣಿಕೆ – Gift** (ಗಿಫ್ಟ್) |
| **ಸಂಪತ್ತು – Wealth** (ವೆಲ್ತ್) |

# ನಕ್ಷಾ ಚಟುವಟಿಕೆ



'ಯುರೋಪ್ ಖಂಡ' ಭೂಗೋಳ ಪಾಠ್ಯ ಪ್ರಕ

**ನಮ್ಮ ಆಶಯ:** ಮೇಲೆ ಯೂರೋಪ್ ಖಂಡದ ರೇಖಾನಕ್ಷೆಯನ್ನು ಕೊಡಲಲಾಗಿದೆ ಗಮನಿಸು. ನಂತರ ಅಲ್ಲಿನ ಸಮುದ್ರ ಮತ್ತು ದೇಶಗಳನ್ನು ಅಟ್ಲಾಸ್ ಸಹಾಯದಿಂದ ಗುರುತಿಸು.

| ಭಾಷಾಚೌಕ |
| --- |
| **ಭೂಪಟ/ನಕ್ಷೆ/ನಕಾಶೆ – Map** (ಮ್ಯಾಪ್) |
| **ದೇಶ – Country** (ಕಂಟ್ರಿ) |

# ದ್ವಿಭಾಷಾ – ಪದಕೋಶ

**‘ಕನ್ನಡ–ಇಂಗ್ಲೀಷ್’ ಅರ್ಥಪಟ್ಟಿ ೧**

| ಕನ್ನಡ | ಇಂಗ್ಲೀಷ್ | ಕನ್ನಡ | ಇಂಗ್ಲೀಷ್ |
|---|---|---|---|
| ಸ್ಮಾರಕ | Monument (ಮಾನ್ಯುಮೇಂಟ್) | ವಿಜಯಸ್ತಂಭ | Victory pillar (ವಿಕ್ಟರಿ ಪಿಲ್ಲರ್) |
| ಭಿತ್ತಿಚಿತ್ರ | wall-painting (ವಾಲ್ ಪೇಂಟಿಂಗ್ಸ್) | ಮೆರವಣಿಗೆ | Procession (ಪ್ರೊಸೆಷನ್) |
| ಪ್ರಾಕೃತಿಕ | Natural (ನ್ಯಾಚುರಲ್) | ಶಾಂತಿ | Peace (ಪಿಸ್) |
| ದ್ವೀಪ | Island (ಐಲ್ಯಾಂಡ್) | ರಾಷ್ಟ್ರಪತಿ | President (ಪ್ರೆಸಿಡೆಂಟ್) |
| ಅವನತಿ | Degradation (ಡಿಗ್ರೇಡೆಷನ್) | ಬುಡಕಟ್ಟು | Tribe (ಟ್ರೈಬ್) |
| ಕ್ರಿಯಾಪದ | Verb (ವರ್ಬ್) | ಸಂಗ್ರಾಮ | Battle (ಬ್ಯಾಟ್‌ಲ್) |
| ಪರ್ವತ | Mount (ಮೌಂಟ್) | ಗೌರವ | Respect (ರೆಸ್ಪೆಕ್ಟ್) |
| ಆಶೀರ್ವಾದ | Blessing (ಬ್ಲೆಸಿಂಗ್) | ಪ್ರತಿಮೆ, ವಿಗ್ರಹ | Statue (ಸ್ಟ್ಯಾಚ್ಯು) |

**‘ಕನ್ನಡ–ಇಂಗ್ಲೀಷ್’ ಅರ್ಥಪಟ್ಟಿ ೨**

| ಕನ್ನಡ | ಇಂಗ್ಲೀಷ್ | ಕನ್ನಡ | ಇಂಗ್ಲೀಷ್ |
|---|---|---|---|
| ಬದಕು | | ಭಕ್ತಿ | |
| ಅದೇಶ | | ಯುದ್ಧ | |
| ಜಾತ್ರೆ | | ಕಲೆ | |
| ಆಡೆಳಿತ | | ಧರ್ಮ | |
| ಸಂತೆ | | ಮೈದಾನ | |
| ಸಹಕಾರ | | ಸಾಧನೆ | |
| ಕೊಕ್ಕರೆ | | ವಾಯುಗುಣ | |
| ಹೊಲಸು | | ಹುಲ್ಲುಗಾವಲು | |

**ನಮ್ಮ ಆಶಯ:** ಮೇಲೆ ಕೊಟ್ಟಿರುವ ‘ಕನ್ನಡ – ಇಂಗ್ಲೀಷ್’ ಅರ್ಥಪಟ್ಟಿ 1 ಗಮನಿಸು. ಅದರಲ್ಲಿ ಕನ್ನಡ ಪಠ್ಯಪುಸ್ತಕದ ೫, ೬ನೇ ಪಾಠ ಮತ್ತು ಸಮಾಜ ವಿಜ್ಞಾನ ಪಠ್ಯಪುಸ್ತಕದ ೧೨, ೧೫ ಮತ್ತು ೨೨ನೇ ಪಾಠದಲ್ಲಿನ ಆಯ್ದ ಪದಗಳಿಗೆ ಇಂಗ್ಲೀಷ್ ಸಮಾನಾರ್ಥಕ ಪದಗಳನ್ನು ಕೊಡಲಾಗಿದೆ. ಓದಿ ಅರ್ಥಮಾಡಿಕೊ. ನಂತರ ‘ಕನ್ನಡ – ಇಂಗ್ಲೀಷ್’ ಅರ್ಥಪಟ್ಟಿ 2ರಲ್ಲಿ ಕೇವಲ ಕನ್ನಡ ಪದಗಳನ್ನು ಕೊಡಲಾಗಿದೆ. ಅವುಗಳಿಗೆ ಇಂಗ್ಲೀಷ್ ಸಮಾನಾರ್ಥಕ ಪದಗಳನ್ನು ಬರೆ. ಅದಕ್ಕಾಗಿ https://kanaja.karnataka.gov.in/ಶಬ್ದಕೋಶ–ತಿರುವಿ, https://baraha.com/kannada/main.php, https://alar.ink/, ಮೈಸೂರು ವಿಶ್ವವಿದ್ಯಾಲಯದ ‘ಇಂಗ್ಲೀಷ್ – ಕನ್ನಡ ನಿಘಂಟು’ ಮುಂತಾದ ನಿಘಂಟುಗಳ ಸಹಾಯ ಪಡೆಯಿರಿ.

# ಅಕ್ಷರ ಜಾಲ

| | | | | | | | | | | | | | |
|---|---|---|---|---|---|---|---|---|---|---|---|---|---|
| ಅ | ಆ | ಇ | ಈ | ಮೌ | ರ್ಯ | ರು | ಬ | ಕಾ | ಯ | ಕ | ತ | ಚಂ | ಅಂ |
| ಕೌ | ಕಾ | ಇ | ಈ | ಉ | ಊ | ಋ | ಎ | ಅ | ಶೋ | ಕ | ರ | ದ್ರ | ಯಾ |
| ಟಿ | ಲ | ಇ | ಭ | ಜ | ಕು | ಶಾ | ನ | ರು | ಐ | ಒ | ಓ | ಗು | ಅಂ |
| ಲ್ಯ | ಡಿ | ಇ | ಈ | ಉ | ಊ | ಋ | ಎ | ಏ | ಕಾ | ಒ | ಅ | ಪ್ತ | ಮೀ |
| ಅ | ಆ | ಇ | ಈ | ಉ | ಊ | ಋ | ಉ | ಏ | ಕೋರ್ | ಒ | ಮೀ | ಮೌ | ರಾ |
| ಉ | ರ | ಜ | ಪೂ | ತ | ರು | ಋ | ಡು | ಏ | ಟ | ಒ | ರ್ | ರ್ಯ | ಬಾ |
| ಸ | ಆ | ಇ | ಈ | ಉ | ಊ | ಋ | ಪಿ | ಏ | ಸಾ | ಒ | ಖು | ಔ | ಯಿ |
| ಮು | ತ | ಇ | ಈ | ಉ | ಊ | ತು | ಪಾ | ಏ | ಮ್ರಾ | ಒ | ಸ್ರು | ಔ | ಅಂ |
| ದ್ರ | ಆ | ಮ | ಹ | ಮ | ದ್ | ಘ | ಜ | ನಿ | ಜ್ಯ | ಒ | ಓ | ಔ | ಅಂ |
| ಗು | ಆ | ಇ | ಈ | ಉ | ಊ | ಲ | ಕ | ಏ | ಲ್ಜಿ | ತು | ಘ | ಲ | ಖ್ |
| ಪ್ತ | ಆ | ಇ | ಈ | ಉ | ಊ | ಕ್ | ಗು | ಏ | ಐ | ಒ | ಓ | ಔ | ಅಂ |
| ಅ | ಹೋ | ಮ್ | ರಾ | ಜ | ವಂ | ಶ | ಲಾ | ಏ | ಐ | ಖಿ | ಲ್ಜಿ | ವಂ | ಶ |
| ಅ | ಆ | ಇ | ಶಾ | ಸ | ನ | ಋ | ಮಿ | ಏ | ಐ | ಒ | ಓ | ಔ | ಅಂ |

ಇತಿಹಾಸ: '೧೨, ಮತ್ತು ೧೩ನೇ ಪಾಠಗಳಿಗೆ ಪ್ರೊಜೆಕ್ಟ್

.......................................... ..........................................

.......................................... ..........................................

.......................................... ..........................................

.......................................... ..........................................

.......................................... ..........................................

.......................................... ..........................................

.......................................... ..........................................

.......................................... ..........................................

.......................................... ..........................................

**ನಮ್ಮ ಆಶಯ:** ಇತಿಹಾಸ ಪಠ್ಯಪುಸ್ತಕದ ೧೨, ಮತ್ತು ೧೩ನೇ ಪಾಠಗಳಿಗೆ ಸಂಬಂಧಿಸಿದ ೧೫ ಪದಗಳು ಈ ಜಾಲದಲ್ಲಿ ಅಡಗಿವೆ. ಅವುಗಳ ಸುತ್ತ ಗೆರೆಹಾಕಿ ಗುರುತಿಸಿ, ಪಕ್ಕದಲ್ಲಿ ಬರೆ.

# ಬಣ್ಣದಾಟ



**ನಮ್ಮ ಆಶಯ:** ಮೇಲಿನ ಚಿತ್ರವನ್ನು ಗಮನಿಸಿ ಬಣ್ಣ ಹಚ್ಚು. ನಂತರ ನಿಮ್ಮ ಮನೆ/ಊರಲ್ಲಿ ದೀಪಾವಳಿ ಹಬ್ಬವನ್ನು ಹೇಗೆ ಆಚರಣೆ ಮಾಡಿದ್ದಿರಿ ಎನ್ನುವುದನ್ನು ಕುರಿತು ತರಗತಿಯಲ್ಲಿ ನಿನ್ನ ಅನುಭವವನ್ನು ಹಂಚಿಕೊ.

ಸಾಂದರ್ಭಿಕ ಕಲಿಕೆಗಾಗಿ

# ಬಣ್ಣದಾಟ



**ನಮ್ಮ ಆಶಯ:** ಇಲ್ಲಿ ಇರುವ ಚಿತ್ರವನ್ನು ಗಮನಿಸಿ, ಬಣ್ಣ ಹಚ್ಚು. ನಂತರ ನಿಮ್ಮ ಮನೆ/ಊರಲ್ಲಿ ಕ್ರಿಸ್‌ಮಸ್ ಹಬ್ಬವನ್ನು ಹೇಗೆ ಆಚರಣೆ ಮಾಡುತ್ತಾರೆ ಎನ್ನುವುದನ್ನು ತಿಳಿದುಕೊ. ಅನಂತರ ನಿನ್ನ ಅನುಭವವನ್ನು ಚಿಕ್ಕ ಲೇಖನ ರೂಪದಲ್ಲಿ ಬರೆ.

**ಭಾಷಾ ಚೌಕ**

**ಪಟಾಕಿ – Cracker** (ಕ್ರ್ಯಾಕರ್)

**ದೀಪ – Lamp** (ಲ್ಯಾಂಪ್)

**ಸಂತಸ – Happiness** (ಹ್ಯಾಪಿನೆಸ್)

**ಬೆಳಕಿನ ಹಬ್ಬ – Festival of light** (ಫೆಸ್ಟಿವಲ್ ಆಫ್ ಲೈಟ್)

# ಕಣ್ಣರಳಿಸಿ ನೋಡು



ಪಕ್ಷಿಗಳ ಪಕ್ಷಿ!!!





ಹಾರುವ ಮೀನುಗಳು!!

# ಗುರುತಿಸುವಾಟ













ಇತಿಹಾಸ: 'ದಿಲ್ಲಿಯ ಸುಲ್ತಾನರು' ಪಾಠಕ್ಕೆ ಪೂರಕ

















**ನಮ್ಮ ಆಶಯ:** ಇಲ್ಲಿ ದಿಲ್ಲಿಯ ಸುಲ್ತಾನರಿಗೆ ಸಂಬಂಧಿಸಿದ ಸ್ಮಾರಕಗಳು ಹಾಗೂ ವ್ಯಕ್ತಿಗಳ ಚಿತ್ರಗಳನ್ನು ಕೊಡಲಾಗಿದೆ. ಅವುಗಳನ್ನು ಗುರುತಿಸಿ, ಸಂಬಂಧಿಸಿದ ವಿವರಗಳನ್ನು ಒಂದೆರಡು ವಾಕ್ಯಗಳಲ್ಲಿ ಕೆಳಗಿನ ಗೆರೆ ಮೇಲೆ ಬರೆ. ಸಹಾಯಕ್ಕಾಗಿ ನಿನ್ನ ಪಠ್ಯ ಪುಸ್ತಕ ನೋಡು.



# ಸಂಗ್ರಹಿಸು – ಬರೆ

**ನಮ್ಮ ಆಶಯ:** ಮೇಲೆ ಚಿತ್ತೋಡಗಡದಲ್ಲಿರುವ ವಿಜಯಸ್ತಂಭದ ಫೋಟೊ ಕೊಡಲಾಗಿದೆ ಗಮನಿಸು. ನಂತರ ಆ ವಿಜಯಸ್ತಂಭದ ಇತಿಹಾಸ ಸಂಗ್ರಹಿಸಿ ಗೆರೆ ಮೇಲೆ ಬರೆ

ಇಲ್ಲಿನ ಚಿತ್ರಗಳನ್ನು ಕೆಲವು ಅಂತರ್ಜಾಲ ತಾಣಗಳಿಂದ ಕೃತಜ್ಞತಾಪೂರ್ವಕವಾಗಿ ತೆಗೆದುಕೊಂಡು ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳಲಾಗಿದೆ.

**ಸಂಪರ್ಕ ಮಾಹಿತಿ:**
ಧ್ವನಿ
ಶೈಕ್ಷಣಿಕ ಸಂಪನ್ಮೂಲ ಕೇಂದ್ರ
#76, ಪುಷ್ಪಾಂಜಲಿ
3ನೇ ಅಡ್ಡರಸ್ತೆ, ಶಿವಗಿರಿ,
ಧಾರವಾಡ 580 007
ಮೊ: 998 666 1055
dhwanitrust@gmail.com,
www.dhwanitrust.org

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರುವುದು ಅಪೇಕ್ಷಣೀಯ.